ಉಲ್ಲೇಖಿಸುವುದುಂಟು; ತಮಿಳರು ಸಂಸ್ಕೃತದ ಹಂಗಿಲ್ಲದೆ ತಮ್ಮ ಭಾಷೆಯನ್ನು ರೂಪಿಸಿಕೊಂಡಿರುವ ಬಗ್ಗೆ ಮೆಚ್ಚುವುದುಂಟು. ಇದಕ್ಕೆ ಕಾರಣ, ಅವರಿಗೆ ತಮಿಳುನಾಡಿನ ದ್ರಾವಿಡ ಚಳವಳಿಯ ಬಗ್ಗೆ ಇದ್ದ ಒಲವು. ಇದಕ್ಕೆ ತಕ್ಕಂತೆ ಮಂತ್ರಿಯಾಗಿ ಕೈಗೊಂಡ ಕ್ರಾಂತಿಕಾರಕ ಕ್ರಮಗಳನ್ನು ಮೆಚ್ಚಿ ಅವರನ್ನು ತಮಿಳುನಾಡಿನ ಮುಖ್ಯಮಂತ್ರಿ ಕರುಣಾನಿಧಿಯವರು ಮದ್ರಾಸಿಗೆ ಕರೆಸಿಕೊಂಡು ಸನ್ಮಾನಿಸಿದ್ದರು; ಇದಕ್ಕೂ, ರಿಪಬ್ಲಿಕನ್ ಪಕ್ಷದ ಕೆಜಿಎಫ್ ಶಾಸಕರಾದ ಆರ್ಮುಗಂ ಬಿಬಿಯವರ ಬೆಂಬಲಕ್ಕೆ ನಿಂತಿದ್ದಕ್ಕೂ, ಬೆಂಗಳೂರಿನ ವಿಚಾರವಾದಿ ವಿದ್ಯಾರ್ಥಿ ಬಳಗದವರು ಪೆರಿಯಾರರನ್ನು ಆದರ್ಶವಾಗಿ ಸ್ವೀಕರಿಸಿದ್ದಕ್ಕೂ ತಾತ್ವಿಕ ನಂಟಿತ್ತು. ಈ ಹಿನ್ನೆಲೆಯಲ್ಲಿ ಬಿಬಿಯವರು ಭಾಷಾ ತಾರತಮ್ಯದ ಬಗ್ಗೆ ಮಾಡುವ ಒಂದು ವಿಶ್ಲೇಷಣೆ ಗಮನಾರ್ಹ:

'ಹೇಲು–ಉಚ್ಚೆ ಹೊರುವಂಥದನ್ನು ನಾನು ನಿಲ್ಲಿಸಿದೆ. ಪತ್ರಿಕೆಗಳಲ್ಲೆಲ್ಲ ಮಲ–ಮೂತ್ರ ಹೊರುವುದನ್ನು ನಿಲ್ಲಿಸಲು ಬಸವಲಿಂಗಪ್ಪ ಪ್ರಯತ್ನ ಮಾಡುತ್ತಿದ್ದಾನೆ ಎಂದು ಬರೆದರೇ ಹೊರತು, ಹೇಲು–ಉಚ್ಚೆ ಅಂತ ಒಬ್ಬರೂ ಬರೆಯಲಿಲ್ಲ. ಮಲಾನೂ ಸಂಸ್ಕೃತ. ಮೂತ್ರಾನೂ ಸಂಸ್ಕೃತ. ಯಾರಿಗೆ ಅರ್ಥವಾಗುತ್ತದೆ? ನಾನು ವೇದಿಕೆಯಿಂದ ಹೇಲು–ಉಚ್ಚೆ ಅಂತ ಹೇಳಿದರೆ 'ಅಸಿಸಿೀ' ಅಂತ ಹೇಳುತ್ತಿದ್ದರು. ಹೇಳಿದ್ದನ್ನು ಕೇಳಿಯೇ 'ಅಸಿಸೀ' ಅಂದರೆ, ಹೊರುವಂತಹ ವ್ಯಕ್ತಿಗೆ ಅದು ಹೇಗಿರಬೇಕು?' ಈ ವಿಶ್ಲೇಷಣೆಯ ಹಿನ್ನೆಲೆಯಲ್ಲಿ 'ಹೊಲೆಮಾದಿಗರ ಹಾಡುಗಳು' ಸಂಕಲನದ ಭಾಷೆಯನ್ನು ಗಮನಿಸಬೇಕು. ಕನ್ನಡ–ಇಂಗ್ಲಿಷುಗಳಿದ್ದಾಗ ಇಂಗ್ಲಿಷ್ ಪರ ನಿಲ್ಲುತ್ತಿದ್ದ ಬಿಬಿ, ಕನ್ನಡ–ಸಂಸ್ಕೃತ ಬಂದಾಗ ಕನ್ನಡಕ್ಕೆ ಮನ್ನಣೆ ಸಲ್ಲಿಸುತ್ತಿದ್ದರು. ಲೇಖಕರು–ಪತ್ರಕರ್ತರು ಜನರಿಗೆ ಅರ್ಥವಾಗುವ ಭಾಷೆಯಲ್ಲಿ ಬರೆಯಬೇಕು ಎನ್ನುವ ಅವರ ಸಂವಹನದ ಪ್ರಶ್ನೆಯೊಳಗೆ, ಆ ಭಾಷೆಯಲ್ಲಿರುವ ಬರಹವು ಮಾನವ ಘನತೆಯ ಆದರ್ಶಗಳನ್ನು ಒಳಗೊಂಡಿರಬೇಕು ಎನ್ನುವ ಅಪೇಕ್ಷೆಯೂ ಇತ್ತು.

### ಸಾಹಿತಿಗಳ ಪ್ರತಿಕ್ರಿಯೆ

ಬೂಸಾ ಪ್ರಕರಣವು ಕನ್ನಡ ಲೇಖಕ ಹಾಗೂ ಚಳವಳಿಗಾರರನ್ನು ಪರ–ವಿರೋಧಿ ಗುಂಪುಗಳಾಗಿ ವಿಭಜಿಸಿತ್ತು. ಬೂಸಾ ಹೇಳಿಕೆಯನ್ನು ಖಂಡಿಸಿದವರಲ್ಲಿ ದೇಜಗೌ, ಬೀಚಿ, ಪಾವೆಂ, ಆಲನಹಳ್ಳಿ ಕೃಷ್ಣ, ಬಿ.ವಿ. ವೈಕುಂಠರಾಜು ಹಾಗೂ ಕನ್ನಡ ಚಳವಳಿಗಾರರಾದ ವಾಟಾಳ್ ನಾಗರಾಜ್, ನಾರಾಯಣಕುಮಾರ್ ಮುಂತಾದವರು ಇದ್ದರು. ಬಿಬಿಯವರ ಪರ ನಿಂತವರಲ್ಲಿ ಕುವೆಂಪು, ಅನಂತಮೂರ್ತಿ, ಲಂಕೇಶ್; ರಾಜಕಾರಣಿಗಳಾಗಿ ಜೆ.ಎಚ್. ಪಟೇಲ್ ಹಾಗೂ ಶಾಸಕ ಆರ್ಮುಗಂ; ಪತ್ರಕರ್ತರಲ್ಲಿ ಕಲ್ಲೆ ಶಿವೋತ್ತಮರಾವ್ ಇದ್ದರು. ಸಮಸ್ಯೆ ಇದ್ದುದು ಕನ್ನಡ ತಟಸ್ಥ ಗುಂಪಿನವರದು. ಬೂಸಾ ಹೇಳಿಕೆ ಒಪ್ಪಿದರೆ, ಕನ್ನಡ ಸಾಹಿತ್ಯ ಪರಂಪರೆ ಕುರಿತು ತಾವೇ ಮಾಡಿರುವ ಚಿಂತನೆ, ಬರಹ, ಪಾಠಗಳನ್ನು ವಿರೋಧಿಸಿದಂತೆ ಆಗುತ್ತಿತ್ತು; ಬೂಸಾ ಪರಿಕಲ್ಪನೆ ವಿರೋಧಿಸಿದರೆ, ದಲಿತರ ಮೇಲಿನ ಹಲ್ಲೆಗೆ ಪರೋಕ್ಷ ಸಮ್ಮತಿಸಿದಂತೆ ಆಗುತ್ತಿತ್ತು. ಈ ದ್ವಂದ್ವದಲ್ಲಿದ್ದ ಇವರಿಗೆ ಸಾಹಿತ್ಯಿಕ ಸೂಕ್ಷ್ಮತೆಯನ್ನು ಬಿಟ್ಟುಕೊಡದೆಯೂ ಸಾಮಾಜಿಕ ಸಂವೇದನೆಯನ್ನು ತೋರುವ ಸಂಕೀರ್ಣ ನಿಲುವನ್ನು ತಾಳಲು ಸಾಧ್ಯವಾಗಲಿಲ್ಲ. ಸಾಹಿತ್ಯದಲ್ಲಿ ಪ್ರವೇಶವಿಲ್ಲದವರು ಮಾಡುವ ಅಸಾಹಿತ್ಯಿಕ ಹೇಳಿಕೆಗೆ ಬೆಲೆ ಕೊಡಬೇಕಿಲ್ಲ ಎಂಬ ಧೋರಣೆಯೇ ಹೆಚ್ಚಿನವರಲ್ಲಿತ್ತು. ಒಬ್ಬ ಪತ್ರಕರ್ತರು ಅದನ್ನು 'ತಲೆಹರಟೆ' ಎಂದೂ ವ್ಯಾಖ್ಯಾನಿಸಿದ್ದುಂಟು. ಹುಬ್ಬಳ್ಳಿ ಸಭೆಯಲ್ಲಿ ಪಾವೆಂ ಅವರು, 'ರಾಜಕೀಯದ ಬಗ್ಗೆ ಸಾವಿರ ಮಾತಾಡಲಿ. ಸಾಹಿತ್ಯದ ಬಗ್ಗೆ ಮಾತಾಡಲು ಅವರಿಗೇನು ಹಕ್ಕು?' ಎಂದು ಪ್ರತಿಕ್ರಿಯಿಸಿದ್ದು ಇದೇ ಧೋರಣೆಯಲ್ಲಿ. ಸಾಮಾಜಿಕ, ರಾಜಕೀಯ, ಸಾಹಿತ್ಯಿಕ ಸಂಗತಿಗಳು ಸಂಸ್ಕೃತಿಯಲ್ಲಿ ಬೆರೆತಿರುತ್ತವೆ;